ನೇರ ಬಿತ್ತನೆ ಭತ್ತ ತಂತ್ರಜ್ಞಾನಕ್ಕೆ ಒತ್ತು

ನವದೆಹಲಿ: ದೇಶದ ಭತ್ತ ಬೆಳೆಯುವ ಪ್ರದೇಶದ ಶೇ. 60ರಷ್ಟು ಭಾಗದಲ್ಲಿ 'ನೇರ ಬಿತ್ತನೆ ಭತ್ತ' (ಡಿಎಸ್‌ಆರ್) ತಂತ್ರಜ್ಞಾನ ಅಳವಡಿಸಲು ವಿಜ್ಞಾನಿಗಳು ಕರೆ ನೀಡಿದ್ದಾರೆ. ತೀವ್ರ ಅಂತರ್ಜಲ ಕುಸಿತದ ಹಿನ್ನೆಲೆಯಲ್ಲಿ, ನೀರಿನ ಉಳಿತಾಯ ಮತ್ತು ಕಡಿಮೆ ವೆಚ್ಚದ ಈ ಪದ್ಧತಿ ಅತ್ಯಗತ್ಯವಾಗಿದೆ. ಹೈಬ್ರಿಡ್ ಮತ್ತು ಜೀನ್‌ಎಡಿಟೆಡ್ ಬೀಜ ತಂತ್ರಜ್ಞಾನಗಳು ಕೃಷಿ ವ್ಯವಸ್ಥೆಯನ್ನು ಸುಸ್ಥಿರಗೊಳಿಸಲಿವೆ. ಒಂದು ಕೆಜಿ ಭತ್ತಕ್ಕೆ 5,000 ಲೀಟರ್‌ವರೆಗೆ ನೀರು ವ್ಯಯವಾಗುತ್ತಿದ್ದು, ಡಿಎಸ್‌ಆರ್ ತಂತ್ರಜ್ಞಾನ ಇದನ್ನು ಗಣನೀಯವಾಗಿ ತಗ್ಗಿಸಿ ರೈತರ ಆದಾಯ ಹೆಚ್ಚಿಸಲಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

■ ಭಾರತದಲ್ಲಿ ಕೃಷಿ ಕ್ರಾಂತಿಗೆ ದಾರಿ

Vijayavani pg 02

ವಿ ರೈತ ಮಿತ್ರ



■ಶ್ರೀಗಂಧ ಬೆಳೆಯಲು ಆತಿಥ್ಯ ಸಸ್ಯಗಳ ಆಯ್ಕೆಯ ಬಗ್ಗೆ ಮಾಹಿತಿ ನೀಡಿ.

| ಥಾಮಸ್ ಚಿತ್ರದುರ್ಗ

ಅರ್ಧ ಪರೋಪಜೀವಿ ಸಸ್ಯವಾದ ಶ್ರೀಗಂಧವು ಪೋಷಕಾಂಶಗಳನ್ನು ಸ್ವತಃ ಪಡೆಯದ ಕಾರಣ ಬೇರಿನ ವಿಶೇಷ ರಚನೆಯಾದ ಹಾಸ್ಟೋರಿಯಾವು ಆತಿಥ್ಯ ಸಸ್ಯದ ಬೇರುಗಳಿಗೆ ಸಂಪರ್ಕ ಹೊಂದಿ ನೆರಳು, ನೀರು ಪೋಷಕಾಂಶಗಳು ಮತ್ತು ಭೌತಿಕ ಬೆಂಬಲ ಪಡೆಯುತ್ತದೆ. ಆರಂಭಿಕ ಹಂತದಲ್ಲಿ ಆತಿಥ್ಯ ಸಸ್ಯ ಮತ್ತು ಶ್ರೀಗಂಧವನ್ನು ನಿಗದಿತ ಅಂತರದಲ್ಲಿ ನೆಡಬೇಕು. ಬಹು ಬೇಗ ಬೆಳೆಯುವ ಆತಿಥ್ಯ ಸಸ್ಯದಿಂದ 12 ಮೀ. ದೂರದಲ್ಲಿ ಚಂದನ ಸಸಿಯನ್ನು ನೆಡುವುದು ಸೂಕ್ತ. ಬಲವಾದ ಆತಿಥ್ಯ ಸಸ್ಯದ ಸಂಪರ್ಕದಿಂದ ಹೊಸದಾಗಿ ನೆಟ್ಟ ಚಂದನದ ಸಸಿಗಳು ಬದುಕುಳಿಯುವ ಪ್ರಮಾಣವು ಬಹಳಷ್ಟು ಹೆಚ್ಚುತ್ತದೆ. ಅಲ್ಲದೆ, ತೀವ್ರ ಬಿಸಿಲಿನಿಂದ ನೆರಳು, ಗಾಳಿಯಿಂದ ಮತ್ತು ಮೇವಿನ ಪ್ರಾಣಿಗಳಿಂದ ರಕ್ಷಣೆ ಒದಗಿಸುತ್ತವೆ ಹಾಗೂ ಚಂದನ ಗಿಡದ ಎತ್ತರ, ಕಾಂಡದ ದಪ್ಪ ಮತ್ತು ಬಯೋಮಾಸ್ ಕೂಡ ಹೆಚ್ಚಾಗುತ್ತದೆ. ಪ್ರಾಥಮಿಕ ಹಂತದಲ್ಲಿ ವೇಗವಾಗಿ ಬೆಳೆಯುವ ತೊಗರಿ, ಅಗಸೆ, ಸೆಣಬು ಅಥವಾ ಯಾವುದೇ ದ್ವಿದಳ ಬೆಳೆಗಳು, ತದನಂತರದಲ್ಲಿ ಸಿರಿಸ್, ಬೇವು, ನೆಲ್ಲಿ, ಗಾಳಿ ಮರ, ಎರಿತ್ರಿನಾ (ಕೋರೆಲ್ ಮರಗಳು), ಕ್ಯಾಸಿಯಾ ಮತ್ತು ಟರ್ಮಿನಾಲಿಯಾ ಜಾತಿಗೆ ಸೇರಿದ ಯಾವುದೇ ಮರಗಳನ್ನು ಬೆಳೆಸಬಹುದು.

| ಡಾ. ಪ್ರಮೀಳಾ ಸಿ.ಕೆ. ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 07

ಇರಾನ್-ಇಸ್ರೇಲ್-ಅಮೆರಿಕದ ಸಂಘರ್ಷದ ಹಿನ್ನೆಲೆಯಲ್ಲಿ ಭಾರತದ ಕೃಷಿ ಉತ್ಪನ್ನಗಳ ರಫ್ತು ಪಹಿವಾಟು ತ್ರಿಶಂಕು ಸ್ಥಿತಿಗೆ ಸಿಲುಕಿದೆ. ಬಾಸಮತಿ ಅಕ್ಕಿ, ಕಾಫಿ, ಚಹಾ, ಗೋಡಂಬಿ, ಮೊಟ್ಟೆ, ಏಲಕ್ಕಿ ಉತ್ಪನ್ನಗಳ ಕಂಟೇನರ್‌ಗಳನ್ನು ಹೊತ್ತ ಹಡಗುಗಳು ಬಂದರುಗಳಲ್ಲೇ ನಿಲ್ಲುವಂತಾಗಿದೆ. ಅತ್ತ ಗುರಿಯೂ ಮುಟ್ಟಲಿಲ್ಲ, ಇತ್ತ ವಾಪಾಸ್ ಕೂಡ ಬರಲಾಗುತ್ತಿಲ್ಲ ಎಂಬಂತಾಗಿದೆ.

ಕೃಷಿ ಉತ್ಪನ್ನಗಳ ರಫ್ತು ಭಾರತದ ತ್ರಿಶಂಕು ಸ್ಥಿತಿ

ಇರಾನ್-ಇಸ್ರೇಲ್-ಅಮೆರಿಕದ ಸಂಘರ್ಷದ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದಲ್ಲಿ ಉಂಟಾದ ಕ್ಷೇಷಮಯ ವಾತಾವರಣದ ಪರಿಣಾಮವಾಗಿ ಭಾರತದ ಕೃಷಿ ಉತ್ಪನ್ನಗಳ ರಫ್ತು ವಹಿವಾಟಿಗೆ ತೀವ್ರ ವ್ಯತ್ಯಯ ಉಂಟಾಗಿದೆ. ಬಾಸಮತಿ ಅಕ್ಕಿ, ಕಾಫಿ, ಚಹಾ, ಗೋಡಂಬಿ, ಮೊಟ್ಟೆ, ಏಲಕ್ಕಿ ಉತ್ಪನ್ನಗಳ ಕಂಟೇನರ್‌ಗಳನ್ನು ಹೊತ್ತ ಹಡಗುಗಳು ಬಂದರುಗಳಲ್ಲೇ ನಿಲ್ಲುವಂತಾಗಿದೆ.

ಮಧ್ಯ ಪ್ರಾಚ್ಯದಲ್ಲಿನ ಭೀಕರ ಯುದ್ಧ ಬಾಸಮತಿ ಅಕ್ಕಿ ರಫ್ತುದಾರರ ನೆಮ್ಮದಿಗೆ ಕೊಳ್ಳಿ ಇಟ್ಟಿದೆ. ಕೊಲ್ಲಿ ರಾಷ್ಟ್ರಗಳಿಗೆ ರಫ್ತಾಗುತ್ತಿದ್ದ ಅಂದಾಜು 61,000–70,000 ಟನ್ ಬಾಸಮತಿ ಅಕ್ಕಿ ಹೇರಿಕೊಂಡಿದ್ದ ಹಡಗು ಬಂದಾರ್ ಅಬ್ಬಾಸ್ ಬಂದರು ಸಮೀಪ ಸಮುದ್ರದಲ್ಲೇ ನಿಲುಕುವಂತಾಗಿದೆ. 2025–26ನೇ ಸಾಲಿನ ಏಪ್ರಿಲ್–ಜನವರಿ ಅವಧಿಯಲ್ಲಿ 5.38 ದಶಲಕ್ಷ ಟನ್ ಬಾಸಮತಿ ಅಕ್ಕಿ ರಫ್ತಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಾಗಿದ್ದ 4.84 ದಶಲಕ್ಷ ಟನ್‌ಗಿಂತ ಶೇ.11ರಷ್ಟು ಹೆಚ್ಚಳವಾಗಿದೆ. ಈ ವರ್ಷ 6.5 ದಶಲಕ್ಷ ಟನ್ ರಫ್ತು ಗುರಿ ಇರಿಸಿಕೊಳ್ಳಲಾಗಿದ್ದು, ಸಂಘರ್ಷ ದೀರ್ಘಕ್ಕೆ ಹೋದರೆ ಗುರಿ ತಲುಪುವದು ಕಷ್ಟ ಎಂದು ಹೇಳಲಾಗುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶಿಪ್‌ಮೆಂಟ್ ವೆಚ್ಚವನ್ನು ಭರಿಸುವದು ರಫ್ತುದಾರರಿಗೆ ಕಷ್ಟ ಎಂದು ಹೇಳಲಾಗುತ್ತಿದೆ. ಪಂಜಾಬ್‌ನ ತರನ್ ತರನ್ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆಯುವ ಬಾಸಮತಿ ಅಕ್ಕಿಗೆ ಇರಾನ್ ಸೇರಿದಂತೆ ಮಧ್ಯಪ್ರಾಚ್ಯ ದೇಶಗಳಿಂದ ಭಾರೀ ಬೇಡಿಕೆ ಇದ್ದು, ಸುಮಾರು ಶೇ.70ರಷ್ಟು ಬಾಸಮತಿ ಅಕ್ಕಿ ಇಲ್ಲಿಂದಲೇ ರಫ್ತಾಗುತ್ತಿದೆ.

ಗೋಡಂಬಿಗೆ ಇಕ್ಕಟ್ಟು

ದೇಶೀಯ ಗೋಡಂಬಿ ಉದ್ಯಮಕ್ಕೆ ಇರಾನ್, ದುಬೈ ವಿಶ್ವಸನೀಯ ಮಾರುಕಟ್ಟೆ. ಯುದ್ಧದ ಪರಿಣಾಮವಾಗಿ ನೂರಾರು ಕೋಟಿ ರೂ ಮೌಲ್ಯದ ಗೋಡಂಬಿ ಸರಕು ತ್ರಿಶಂಕು ಸ್ಥಿತಿಯಲ್ಲಿ ಸಿಲುಕುವಂತಾಗಿದೆ. ಇದೇ ಸಂದರ್ಭದಲ್ಲಿ ಗೋಡಂಬಿ ಉದ್ಯಮಿಗಳಿಗೆ ಸಾಂಪ್ರದಾಯಿಕ ರಫ್ತು ಮಾರುಕಟ್ಟೆಯನ್ನು ಕಳೆದುಕೊಳ್ಳುವ ಭೀತಿ ಎದುರಾಗಿದ್ದು, ಸಂಕಷ್ಟದಲ್ಲಿ ಸಿಲುಕುವಂತಾಗಿದೆ. ಇದೇ ಹೊತ್ತಿನಲ್ಲಿ ವಿಯಟ್ನಾಮ್‌ದ ಗೋಡಂಬಿ ಉದ್ಯಮಿಗಳು ಭಾರತಕ್ಕೆ ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದ್ದು, ಅಮೆರಿಕ ಮತ್ತು ಚೀನಾ ಮಾರುಕಟ್ಟೆಯ ಮೇಲೆ ಕಣ್ಣಿಟ್ಟಿದ್ದಾರೆ. ಇನ್ನು ಭಾರತದಿಂದ ಗೋಡಂಬಿ ಕಂಟೇನರ್ ಹೇರಿಕೊಂಡು ಹೊರಟ ಹಡಗುಗಳು ಮಾರ್ಗ ಬದಲಾಯಿಸಿ ಗುಡ್ ಹೋಪ್ ಭೂಶಿರವನ್ನು ಸುತ್ತು ಹಾಕಿ ಹೋದರೆ ತನ್ನ ಗುರಿ ತಲುಪುವದು 15–20 ದಿನ ತಡವಾಗಲಿದೆ. ಇದರಿಂದಾಗಿ ಪ್ರತಿ ಕಂಟೇನರ್‌ಗೆ ಸಾಗಾಣಿಕಾ ವೆಚ್ಚ 200–400 ಡಾಲರ್‌ದಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜಿಸಲಾಗಿದೆ.

ಕುಕ್ಕುಟೋದ್ಯಮಕ್ಕೆ ಸಮಸ್ಯೆ

ಯುಎಇ ಮಾರುಕಟ್ಟೆಗೆ ಈ ವರ್ಷ ಭಾರತದಿಂದ ಕೋಳಿ ಉತ್ಪನ್ನಗಳ ರಫ್ತು 93 ದಶಲಕ್ಷ ಡಾಲರ್‌ಗೆ ಹೆಚ್ಚಳವಾಗುವ ಸಂಭವ ಇದ್ದು, ಕಳೆದ ವರ್ಷ ಇದೇ ಅವಧಿಯಲ್ಲಿದ್ದ 24 ದಶಲಕ್ಷ ಡಾಲರ್‌ಗೆ ಹೋಲಿಸಿದರೆ ಮೂರು ಪಟ್ಟಿಗಿಂತಲೂ ಅಧಿಕವಾಗಿದೆ. 2025–26ನೇ ಸಾಲಿನ ಒಂಭತ್ತು ತಿಂಗಳ ಅವಧಿಯಲ್ಲಿ ಹಡಗಿಗೆ 237 ದಶಲಕ್ಷ ಡಾಲರ್ ಮೌಲ್ಯದ ಕೋಳಿ ಉತ್ಪನ್ನಗಳನ್ನು ಹೇರಲಾಗಿದ್ದು, ಈ ಹಿಂದೆ ಇದ್ದ 119 ದಶಲಕ್ಷ ಡಾಲರ್‌ಗಿಂತ ಅಧಿಕವಾಗಿದೆ ಎಂದು ಮೂಲಗಳು ತಿಳಿಸಿವೆ. ಸದ್ಯದ ಬಿಕ್ಕಟ್ಟು ದೇಶೀಯ ಕುಕ್ಕುಟೋದ್ಯಮದ ಬೆಳವಣಿಗೆಯ ಮೇಲೆ ಹೇಳಿಕೊಳ್ಳುವಂತಹ ಪರಿಣಾಮ ಬೀರಲಾರದು ಎಂದು ವಿಶ್ಲೇಷಿಸಲಾಗಿದ್ದರೂ, ಯುದ್ಧ ಗಂಭೀರವಾಗಿ ಮುಂದುವರಿದರೆ ತೊಂದರೆ ತಪ್ಪಿದ್ದಲ್ಲ ಎನ್ನಲಾಗುತ್ತಿದೆ. ಒಂದು ವೇಳೆ ಸರಕು ಸಾಗಾಣಿಕ ಸುಗಮವಾಗಿ ಸಾಗಿದರೆ ಯಾವುದೇ ತೊಂದರೆ ಇಲ್ಲ. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯ ಎಂಬುದು ಈಗ ಮಿಲಿಯನ್ ಡಾಲರ್ ಪ್ರಶ್ನೆ.



ಚಹಾಕ್ಕೆ ಟೆನ್ಷನ್

ದೇಶದಿಂದ ಇರಾನ್ ಸೇರಿದಂತೆ ಗಲ್ಫ್ ರಾಷ್ಟ್ರಗಳಿಗೆ ಪ್ರಮುಖವಾಗಿ ರಫ್ತಾಗುವ ಕೃಷಿ ಉತ್ಪನ್ನಗಳ ಪೈಕಿ ಚಹಾ ಕೂಡ ಒಂದು. ಒಟ್ಟು ಚಹಾ ರಫ್ತಿನಲ್ಲಿ ಗಲ್ಫ್ ಪಾಲು ಶೇ.45–50ರಷ್ಟಿದೆ. ಈಗಿನ ಯುದ್ಧ ಪರಿಸ್ಥಿತಿ ಒಂದು ತಿಂಗಳಿಗಿಂತ ಹೆಚ್ಚು ಕಾಲ ಮುಂದುವರೆದರೆ ಚಹಾ ರಫ್ತು ಹಾಗೂ ಬೆಲೆ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಈಗಾಗಲೇ ಅವರು ಹಡಗಿಗೆ ಚಹಾ ಹೇರಲು ಕೋಟ್ಯಂತರ ರೂ ಪಾವತಿಸಿದ್ದಾರೆ. ಕಳೆದ ವರ್ಷ ಇರಾಕ್‌ಗೆ 52.59 ದಶಲಕ್ಷ ಕೆಜಿ, ಯುಎಇಗೆ 52.71 ದಶಲಕ್ಷ ಕೆಜಿ, ಇರಾನ್‌ಗೆ 11.25 ದಶಲಕ್ಷ ಕೆಜಿ, ಸೌದಿ ಅರೇಬಿಯಾಕ್ಕೆ 7.94 ದಶಲಕ್ಷ ಕೆಜಿ ಚಹಾ ರಫ್ತು ಮಾಡಲಾಗಿದೆ. ಆದರೆ ಈ ಬಾರಿ ಕೇವಲ ಗಲ್ಫ್ ದೇಶಗಳಿಗೆ ಮಾತ್ರವಲ್ಲ ಕಜಾಕಿಸ್ತಾನ, ಕಿರ್ಗಿಜಿಸ್ತಾನ ಹಗೂ ಉಜ್ಬೇಕಿಸ್ತಾನಗಳಿಗೂ ಚಹಾ ರಫ್ತು ಅನಿಶ್ಚಿತತೆಗೆ ಸಿಲುಕಿದೆ. ರಫ್ತುದಾರರ ಸ್ಥಿತಿ ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ.

S-karnataka pg 10

ಮಾ.13ರಂದು ರೈತರಿಗೆ 22ನೇ ಕಂತು ಸಂದಾಯ



ಹೊಸದಿಲ್ಲಿ: ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯ 22ನೇ ಕಂತಿನ ಹಣವನ್ನು ಮಾರ್ಚ್ 13ರಂದು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುತ್ತದೆ. ಅಂದು ಅಸ್ಸಾಂನ ಗುವಾಹಟಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಂತು ಮೊತ್ತದ ಡಿಜಿಟಲ್ ವರ್ಗಾವಣೆಗೆ ಚಾಲನೆ ನೀಡುವರು. ದೇಶಾದ್ಯಂತ ಇರುವ 9.32 ಕೋಟಿ ರೈತರ ಖಾತೆಗಳಿಗೆ ತಲಾ 2,000 ರೂ. ಗಳನ್ನು ವರ್ಗಾಯಿಸಲಾಗುವುದು ಎಂದು ಕೃಷಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಿಎಂ-ಕಿಸಾನ್ ಯೋಜನೆಯನ್ನು ಮೋದಿ ಸರಕಾರ 2019ರಲ್ಲಿ ಪ್ರಾರಂಭಿಸಿತು. ಪ್ರತಿವರ್ಷ 2,000 ರೂ.ಗಳ ಮೂರು ಕಂತುಗಳಲ್ಲಿ ಒಟ್ಟು 6,000 ರೂ.ಗಳನ್ನು ರೈತರ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. 22ನೇ ಕಂತಿನಲ್ಲಿ ಒಟ್ಟು 19,000 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗುತ್ತದೆ.

V-karnataka pg 05

ಮಧ್ಯಪ್ರಾಚ್ಯದ ಸಂಘರ್ಷ, ರಪ್ಪು ಉದ್ಯಮಕ್ಕೆ ಸಂಕಷ್ಟ

ಮಧ್ಯಪ್ರಾಚ್ಯದಲ್ಲಿನ ಸಂಘರ್ಷದಿಂದಾಗಿ ಜಾಗತಿಕವಾಗಿ ತೈಲ ಸರಬರಾಜು ಮತ್ತು ಬೆಲೆಯ ಮೇಲೆ ಭಾರಿ ಪರಿಣಾಮ ಬೀರಿದೆ. ಈ ಸಂಘರ್ಷ ರಾಜ್ಯದ ರಪ್ಪು ಉದ್ಯಮದ ಮೇಲೂ ಸಂಕಷ್ಟ ಉಂಟು ಮಾಡಿದೆ. ಬ್ಯಾಡಗಿ ಮೆಣಸಿನಕಾಯಿ ಖಾರದ ಪುಡಿ ಕಂಟೇನರ್ ಬಂದರಿನಲ್ಲೇ ಲಂಗರು ಹಾಕಿದ್ದರೆ, ಮೊಟ್ಟೆಮತ್ತು ಕೋಳಿಗಳ ರಪ್ಪು ನಿಂತಿದೆ. ಅಡಕೆ ಹಾಳೆಯ ತಟ್ಟೆ ಇನ್ನಿತರ ಉತ್ಪನ್ನಗಳು ಹೊರ ದೇಶಕ್ಕೆ ಪೂರೈಕೆ ಆಗದೆ ಉದ್ದಿಮೆದಾರರು ತೊಂದರೆಗೆ ಸಿಲುಕಿದ್ದಾರೆ.

ಅಡಕೆ ತಟ್ಟೆಗೂ ತಟ್ಟಿದ ಬಿಸಿ



ವಿದೇಶಕ್ಕೆ ರಫ್ತಾಗಲು ಸಿದ್ಧವಿರುವ ಅಡಕೆ ತಟ್ಟೆಮತ್ತಿತರ ಉತ್ಪನ್ನಗಳು.

ಶಿವಮೊಗ್ಗ: ಮಧ್ಯಪ್ರಾಚ್ಯದ ಸಂಘರ್ಷವು ಕರ್ನಾಟಕದ ಅಡಕೆ ತಟ್ಟೆ ತಯಾರಿಕಾ ಉದ್ಯಮದ ಮೇಲೂ ಪರಿಣಾಮ ಬೀರಿದೆ.

ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ , ದಾವಣಗೆರೆ, ಚಿತ್ರದುರ್ಗದಲ್ಲಿ ಅಡಕೆ ಹಾಳೆಗಳಿಂದ ತಟ್ಟೆಗಳನ್ನು ಉತ್ಪಾದಿಸುವ ಉದ್ಯಮಗಳಿವೆ. ಇಲ್ಲಿ ತಯಾರಾಗುವ ಗುಣಮಟ್ಟದ ತಟ್ಟೆಗಳನ್ನು ಬ್ರಿಟನ್, ನೆದರ್‌ಲೆಂಡ್, ಜರ್ಮನಿ ಸೇರಿ ವಿವಿಧೆಡೆಗೆ ರಫ್ತು ಮಾಡಲಾಗುತ್ತದೆ. ಶಿವಮೊಗ್ಗ ಜಿಲ್ಲೆಯೊಂದರಲ್ಲೇ ಮಾಸಿಕ 40-50 ಕೋಟಿ ರೂ. ಮೌಲ್ಯದ ಅಡಕೆ ತಟ್ಟೆಗಳು ರಫ್ತಾಗುತ್ತವೆ. ಈಗ ಮಧ್ಯಪ್ರಾಚ್ಯದ ಸಂಘರ್ಷದಿಂದ ಸರಕು ಸಾಗಣೆ ಹಡಗುಗಳು ಸ್ಥಗಿತಗೊಂಡು ಈ ಉದ್ಯಮದ ಮೇಲೆ ಕರಿನೆರಳು ಆವರಿಸಿದೆ.

- 40-50 ಕೋಟಿ ರೂ. ವಹಿವಾಟಿಗೆ ಬರೆ

ಅಡಕೆ ಹಾಳೆಯಿಂದ ತಯಾರಾದ ನಾನಾ ಉತ್ಪನ್ನಗಳು ಕಾರ್ಖಾನೆಯಲ್ಲೇ ಉಳಿದುಕೊಂಡಿವೆ. ಆನೇಕರು ಬ್ಯಾಂಕ್‌ಗಳಿಂದ ಸಾಲ ಪಡೆದು ಉದ್ದಿಮೆಗಳನ್ನು ಸ್ಥಾಪಿಸಿದ್ದಾರೆ. ವ್ಯಾಪಾರವೇ ಆಗದಿದ್ದರೆ ಬಡ್ಡಿ ಕಟ್ಟುವುದೂ ಕಷ್ಟವಾಗಿದೆ. ಸರಕಾರ ಉದ್ದಿಮೆದಾರರ ಸಂಕಷ್ಟಕ್ಕೆ ಸ್ಪಂದಿಸಬೇಕು.
- ಸಿ.ಗುರುಪ್ರಸಾದ್ ಉಪಾಧ್ಯಕ್ಷ, ಶಿವಮೊಗ್ಗ ಜಿಲ್ಲಾ ಅರೆಕಾ ಲೀಫ್ ಮ್ಯಾನುಫೆಕ್ಚರಿಂಗ್ ಅಂಡ್ ಮಾರ್ಕೆಟಿಂಗ್ ಅಸೋಸಿಯೇಷನ್

ಕಾರ್ಮಿಕರಿಗಿಲ್ಲ ಕೆಲಸ

ಅಡಕೆ ಹಾಳೆಯಿಂದ ತಟ್ಟೆ, ಲೋಟ, ಚಮಚ ಇತ್ಯಾದಿಗಳನ್ನು ತಯಾರಿಸಲಾಗುತ್ತದೆ. ಆದರಲ್ಲಿ ಎಫ್‌ಎಸ್‌ಎಐ, ಐಎಸ್‌ಒ, ಫೈಟೊಸಾನಿಟರಿ ಸೇರಿ ವಿವಿಧ ಪ್ರಮಾಣ ಪತ್ರಗಳನ್ನು ಪಡೆದು ವಿದೇಶಕ್ಕೆ ರಫ್ತು ಮಾಡಲಾಗುತ್ತದೆ. ದಕ್ಷಿಣ ಭಾರತದ ಕರ್ನಾಟಕ ಮತ್ತು ತಮಿಳುನಾಡು ಸೇರಿ ವಾರ್ಷಿಕ ಅಂದಾಜು 2,500 ಕೋಟಿ ರೂ. ಮೌಲ್ಯದ ವಹಿವಾಟು ನಡೆಸಲಾಗುತ್ತಿದೆ. ರಾಜ್ಯದಲ್ಲಿಈ ಉದ್ಯಮವು ನೇರ ಮತ್ತು ಪರೋಕ್ಷವಾಗಿ ಲಕ್ಷಾಂತರ ಕಾರ್ಮಿಕರಿಗೆ ಉದ್ಯೋಗ ನೀಡಿದೆ. ವಿದೇಶಕ್ಕೆ ರಫ್ತು ಮಾಡಲೆಂದೇ ಹಲವು ಮಾನದಂಡಗಳ ಅನ್ವಯ ಅಡಕೆ ಹಾಳೆಯಿಂದ ನಾನಾ ಉತ್ಪನ್ನಗಳನ್ನು ಸಿದ್ಧಪಡಿಸಲಾಗುತ್ತದೆ. ಸಕಾಲದಲ್ಲಿರಫ್ತಾಗದಿದ್ದರೆ ಉದ್ಯಮಿಗಳ ಮೇಲೆ ಅನಗತ್ಯ ಹೊರೆ ಸೃಷ್ಟಿಯಾಗುತ್ತದೆ.

- ಮಾಹಿತಿ: **ಆಕಾಶ್ ಬಿ.ಕನ್ನಾಳಿ**, ಶಿವಮೊಗ್ಗ

ಕುಕ್ಕುಟೋದ್ಯಮಕ್ಕೆ ಕೊಕ್ಕೆ

ಚಿತ್ರದುರ್ಗ: ಒಂದೆಡೆ ಮಧ್ಯಪ್ರಾಚ್ಯದ ಸಂಘರ್ಷ ಹಾಗೂ ಇನ್ನೊಂದೆಡೆ ಸುಡು ಬಿಸಿಲಿನ ತಾಪಕ್ಕೆ ಸಿಲುಕಿ ಕುಕ್ಕುಟೋದ್ಯಮ ತತ್ತರಿಸುತ್ತಿದೆ. ಕೋಳಿ ಮೊಟ್ಟೆ ಬೆಲೆ 4.60 ರೂ.ಗೆ ಇಳಿಕೆಯಾಗಿದೆ. ಸುಮಾರು 70ರಿಂದ 80 ಪೈಸೆ ಕಡಿಮೆ ಬೆಲೆಗೆ ಮಾರಾಟ ಮಾಡುವ ಸ್ಥಿತಿ ತಲುಪಿ ಫೌಲ್ಟ್ರಿ ಮಾಲೀಕರು ನಷ್ಟ ಅನುಭವಿಸುವಂತಾಗಿದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ಹಾಗೂ ದಾವಣಗೆರೆ ಜಿಲ್ಲೆಯ ಚಿಳ್ಳಕೆರೆ ತಾಲೂಕುಗಳಲ್ಲಿ 25ಕ್ಕೂ ಹೆಚ್ಚು ಮೊಟ್ಟೆ ಉತ್ಪಾದನೆ ಮಾಡುವ ಲೇಯರ್ ಫೌಲ್ಟ್ರಿ ಫಾರಂಗಳಿವೆ. ಇದರಲ್ಲಿ ದಿನಕ್ಕೆ 25 ಲಕ್ಷಕ್ಕೂ ಅಧಿಕ ಮೊಟ್ಟೆ ಉತ್ಪಾದನೆ ಮಾಡಲಾಗುತ್ತದೆ. ಮಧ್ಯಪ್ರಾಚ್ಯದ ಸಂಘರ್ಷದಿಂದ ಕರ್ನಾಟಕ ಹಾಗೂ ತಮಿಳುನಾಡುಗಳಿಂದ ಹೊರ ರಾಷ್ಟ್ರಗಳಿಗೆ ಹಡಗು ಹಾಗೂ ವಿಮಾನಗಳ ಮೂಲಕ ರಫ್ತಾಗುತ್ತಿದ್ದ ಮೊಟ್ಟೆಗೆ ಬ್ರೇಕ್ ಬಿದ್ದಿದೆ. ಇದರಿಂದ ಮೊಟ್ಟೆ ಬೆಲೆಯಲ್ಲಿ ಗಣನೀಯವಾಗಿ ಕುಸಿತವಾಗಿದೆ.

ಬೇಸಿಗೆ ಕುಕ್ಕುಟೋದ್ಯಮಕ್ಕೆ ಮಾರಕವಾದ ಕಾಲ. ಈಗ ಇದರ ಜೊತೆ ಅಮೆರಿಕ, ಇಸ್ರೇಲ್, ಇರಾನ್ ಸಂಘರ್ಷ

- ಮೊಟ್ಟೆ ಬೆಲೆ ಇಳಿಕೆ
- ಫೌಲ್ಟ್ರಿ ಫಾರಂ ಮಾಲೀಕರಿಗೆ ಸಂಕಷ್ಟ

ಆರಬ್ ದೇಶಗಳಿಗೆ ಮೊಟ್ಟೆ ರಫ್ತು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಕಚ್ಚಾವಸ್ತುಗಳ ಬೆಲೆ ದಿನಕ್ಕೆ ಹೆಚ್ಚಿದೆ, ಆದರೆ ಮೊಟ್ಟೆ ಬೆಲೆ ಇಳಿಕೆಯತ್ತ ಸಾಗಿದೆ.
- ವಿಜಯ ಕುಮಾರ್
ಫೌಲ್ಟ್ರಿ ಮಾಲೀಕ, ಕೋನಸಾಗರ.

ಸೇರಿ ಕೊಂಡಿರುವುದು ಫೌಲ್ಟ್ರಿ ಫಾರಂ ಮಾಲೀಕರ ಆತಂಕ ದ್ವಿಗುಣವಾಗಿದೆ. ಇನ್ನೇನು ಶಾಲೆಗಳಿಗೆ ಬೇಸಿಗೆ ರಜೆ ಆಗಮಿಸಲಿದ್ದು, ಶಾಲೆಗೆ ವಿತರಣೆಯಾಗುತ್ತಿದ್ದ ಮೊಟ್ಟೆಗೂ ಬ್ರೇಕ್ ಬೀಳಲಿದೆ. ಇದು ಇನ್ನೊಂದು ಹೊಡೆತ ವಾಗಲಿದೆ ಎಂದು ಪೌಲ್ಟ್ರಿಗಳ ಮಾಲೀಕರು ಆಳಲು ತೋಡಿಕೊಳ್ಳುತ್ತಾರೆ.

- ಮಾಹಿತಿ: **ಆಕೊಂಡ್ಲಹಳ್ಳಿ ಮಹಾದೇವ** ಮೊಳಕಾಲ್ಮುರು


ಮೊಳಕಾಲ್ಮುರು ತಾಲೂಕು ಕೋನಸಾಗರದಲ್ಲಿನ ಕೋಳಿ ಫಾರಂ ಒಂದರಲ್ಲಿ ದಾಸ್ತಾನು ಮಾಡಿರುವ ಮೊಟ್ಟೆಗಳು.

ಬ್ಯಾಡಗಿ ಮೆಣಸಿನಕಾಯಿಗೂ ತಟ್ಟಿದ ಯುದ್ಧದ ಘಾಟು


ಮಾರುಕಟ್ಟೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ವಹಿವಾಟು

ಹಾವೇರಿ: ಪ್ರತಿ ತಿಂಗಳು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಸುಮಾರು 1,000 ಟನ್ ಮೆಣಸಿನಕಾಯಿ ಖಾರದ ಪುಡಿ ರಫ್ತು ಆಗುತ್ತಿತ್ತು. ಆದರೆ 15 ದಿನಗಳಿಂದ ರಫ್ತು ನಿಂತಿರುವುದರಿಂದ ಹತ್ತಾರು ಕೋಟಿ ರೂ ಹಣ ಬಾಕಿ ಉಳಿದಿದೆ. ಬಂದರುಗಳಲ್ಲಿ ಖಾರದ ಪುಡಿ ಕಂಟೇನರ್‌ಗಳು ನಿಂತಿರುವುದರಿಂದ ವ್ಯಾಪಾರಿಗಳಿಗೆ ಭಾರಿ ನಷ್ಟವಾಗುವ ಭೀತಿ ಎದುರಾಗಿದೆ.

ಬೆಲೆ ಕುಸಿತದ ಮುನ್ಸೂಚನೆ

ಬ್ಯಾಡಗಿ ಮಾರುಕಟ್ಟೆಗೆ ಬಳ್ಳಾರಿ ಹಾಗೂ ಆಂಧ್ರಪ್ರದೇಶ ಸೇರಿ ವಿವಿಧ ಭಾಗಗಳಿಂದ ರೈತರು ಮೆಣಸಿನಕಾಯಿ ಮಾರಾಟಕ್ಕೆ ಬರುತ್ತಾರೆ. ಆದರೆ ರಫ್ತು ಸ್ಥಗಿತ ಗೊಂಡಿರುವುದರಿಂದ ಮಾರುಕಟ್ಟೆಯಲ್ಲಿ ವಹಿವಾಟು ಮಂದವಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಮೆಣಸಿನಕಾಯಿ ಬೆಲೆಯಲ್ಲಿ ಕುಸಿತ ಸಂಭವಿಸುವ ಸಾಧ್ಯತೆ ಇದೆ ಎಂದು ಕೆಲ ವ್ಯಾಪಾರಿಗಳು ತಿಳಿಸಿದ್ದಾರೆ.

- ಮಾಹಿತಿ: **ಗಣೇಶ ಅರ್ಕಾಚಾರಿ**, ಬ್ಯಾಡಗಿ

- ಮಧ್ಯಪ್ರಾಚ್ಯದಿಂದ ಬರಬೇಕಿದ್ದ ಹತ್ತಾರು ಕೋಟಿ ರೂ. ಬಾಕಿ
- ಬಂದರುಗಳಲ್ಲಿ ಕಂಟೇನರ್ ಜಾಮ್
- ವ್ಯಾಪಾರಿಗಳಿಗೆ ಭಾರಿ ನಷ್ಟವಾಗುವ ಭೀತಿ

ಮಧ್ಯಪ್ರಾಚ್ಯದ ಸಂಘರ್ಷ ಪರಿಣಾಮ ಇತರ ಸಮುದ್ರ ಮಾರ್ಗದ ಕಂಟೇನರ್ ಸಾಗಣೆ ಬಾಡಿಗೆಯಲ್ಲೂ ಭಾರಿ ಏರಿಕೆ ಕಂಡು ಬಂದಿದೆ. ಮೊದಲು ಒಂದು ಕಂಟೇನರ್‌ಗೆ ಸುಮಾರು 1800 ಡಾಲರ್ ಇದ್ದ ಬಾಡಿಗೆ, ಈಗ 3,500 ಡಾಲರ್‌ಗಿಂತ ಹೆಚ್ಚಾಗಿದೆ. ಇದರ ಪರಿಣಾಮ ರಫ್ತು ಮೇಚ್ಚ ಹೆಚ್ಚಾಗಿ ವ್ಯಾಪಾರಿಗಳಿಗೆ ಭಾರಿ ಹೊರೆ ಉಂಟಾಗಿದೆ.
-ರಾಜು ಮೊರಗೇರಿ ವರ್ತಕರ ಸಂಘದ ಕಾರ್ಯದರ್ಶಿ ಹಾಗೂ ವ್ಯಾಪಾರಸ್ಥ

V-karnataka pg 07

Early spring advances opening of Tulip garden

Ind Exp Pg 05

FAYAZ WANI @ Srinagar

THE unusually warm winter and rise in temperatures in February and March have advanced the arrival of spring in Srinagar, leading to the early opening of the famed Tulip Garden in Srinagar.

The Tulip garden, which used to be accessible in the last week of March, would be thrown open to visitors on March 16 this year.

Assistant Floriculture Officer of Tulip Garden Imran Ahmad told this newspaper that an unusually warm winter and rise in the Tulip Garden, which is spread over 450 kanals of land and is situated along the banks of the world-famous Dal Lake and at the foothills of the Zabarwan mountain range, will have 1.8 million tulip bulbs of more than 70 varieties, including some new varieties.

The garden features early, mid, and late varieties of tulips to ensure that the flowers remain in bloom for nearly a month. "This staggered blooming pattern allows visitors to experience a vibrant display of colours and varieties throughout the month-long tulip show," he added. Preparing the garden for the annual one-month tulip show is a year-long effort involving more than 100 gardeners and casual labourers, who work tirelessly to maintain the landscape and ensure that the flowers bloom in perfect harmony.

"We work round the year to make the tulip garden more attractive so that more and more tourists and locals visit the garden," Imran said.

Apart from tulips, the garden also features other spring flowers such as daffodils, hyacinths and muscari, along with blossoming trees that add to the vibrant floral display greeting visitors. The duration of the tulip bloom largely depends on the weather conditions.

According to Imran, the cooler temperatures, light drizzles and overcast conditions can extend the life of tulips, while warmer weather can shorten their blooming period, which typically lasts between 10 and 15 days. "Some tulip varieties have already bloomed, while others are still in the bud stage. If there is conducive weather, the garden can remain open for about a month," he said.

The opening of the Tulip Garden signals the arrival of spring in Kashmir, marking the beginning of the Valley's vibrant tourism season.

Since its inauguration in 2007 by then Jammu and Kashmir Chief Minister Ghulam Nabi Azad, the Tulip Garden has grown into one of the valley's biggest attractions.



'One-month Tulip show is a year-long effort'

The garden features early, mid, and late varieties of tulips to ensure that the flowers remain in bloom for nearly a month. "This staggered blooming pattern allows visitors to experience a vibrant display of colours and varieties throughout the month-long tulip show," he added. Preparing the garden for the annual one-month tulip show is a year-long effort involving more than 100 gardeners and casual labourers.